ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ), ದಾವಣಗೆರೆ.

SJJES ಸ್ಥಾಪನೆ- 1962

# ವಿದ್ಯಾವರಣ

ವಿಶೇಷ ಪುರವಣಿ ಮಕ್ಕಳ ಮಾಸಪತ್ರಿಕೆ

ದಿನಾಂಕ : 14/04/2026 | : www.sjjes.ac.in | : info@sjjes.ac.in | : +91.8192.277698

## ಶಾಂತಿದೂತ ಮಹಾವೀರ



ಮಹಾವೀರ ಜಯಂತಿ ಜೈನಧರ್ಮದ ಪ್ರಮುಖ ಹಬ್ಬಗಳಲ್ಲಿ ಒಂದು. ಇದು ಜೈನಧರ್ಮದ ೨೪ನೇ ತೀರ್ಥಂಕರ ಭಗವಾನ್ ಮಹಾವೀರನ ಜನ್ಮದಿನವಾಗಿದೆ. ಕ್ರಿ.ಪೂ. ೫೯೯ ರಲ್ಲಿ ಬಿಹಾರದ ಕುಂದ ಎಂಬ ಗ್ರಾಮದಲ್ಲಿ, ಸಿದ್ದಾರ್ಥ ಮತ್ತು ತ್ರಿಶಾಲ ಎಂಬ ದಂಪತಿಗಳ ಮಗನಾಗಿ ಜನ್ಮ ತಾಳಿದರು. ಧೈರ್ಯ, ದಯೆ, ಸಹನೆ ಎಂಬ ಗುಣಗಳನ್ನು ಬಾಲ್ಯದಲ್ಲಿಯೇ ಮೈಗೂಡಿಸಿಕೊಂಡಿದ್ದರು. ಮಹಾವೀರ ತಮ್ಮ ೩೦ನೇ ವಯಸ್ಸಿನಲ್ಲಿ ತಮ್ಮ ವೈಭವಯುತ ಜೀವನವನ್ನು ತ್ಯಜಿಸಿ ತಪಸ್ಸಿನ ಮಾರ್ಗ ತುಳಿದರು. ಅವರು ೧೨ ವರ್ಷಗಳ ಕಾಲ ಕಠಿಣ ತಪಸ್ಸು ಆಚರಿಸಿದರು. ನಂತರ ಜ್ಞಾನೋದಯ ಪಡೆದರು. ಇದರಿಂದ ಅವರು ಕೇವಲ ಜ್ಞಾನ ಪಡೆದರು. ಅದರ ಜೊತೆಗೆ ಜನರಿಗೆ ಸತ್ಯ, ಅಹಿಂಸೆ, ಅಪರಿಗ್ರಹ, ಅಸ್ತೇಯ ಮತ್ತು ಬ್ರಹ್ಮಚರ್ಯ ಎಂಬ ಪಂಚಮಹಾವ್ರತಗಳನ್ನು ಬೋಧಿಸಿದರು. ಮಹಾವೀರ ಜಯಂತಿಯನ್ನು ಭಾರತದಾದ್ಯಂತ ವಿಶೇಷವಾಗಿ ಜೈನ ಸಮುದಾಯದವರು ಭಕ್ತಿಭಾವದಿಂದ ಆಚರಿಸುತ್ತಾರೆ. ಈ ದಿನ ಜೈನ ಮಂದಿರಗಳಲ್ಲಿ ವಿಶೇಷವಾದ ಪೂಜೆಗಳು ನಡೆಯುತ್ತವೆ. ಭಗವಾನ್ ಮಹಾವೀರರ ಮೂರ್ತಿಗೆ ಹೂಗಳಿಂದ ಅಲಂಕರಿಸಿ , ಮೆರವಣಿಗೆ ಮಾಡುತ್ತಾರೆ. ಭಕ್ತರು ಧಾರ್ಮಿಕ ಗ್ರಂಥಗಳನ್ನು ಓದಿ, ಮಹಾವೀರರ ಉಪದೇಶಗಳನ್ನು ಸ್ಮರಿಸಿಕೊಳ್ಳುತ್ತಾರೆ. ಅನೇಕರು ದಾನಧರ್ಮಗಳನ್ನು ಮಾಡಿ ಬಡವರಿಗೆ ಕೈಲಾದಷ್ಟು ಸಹಾಯ ಮಾಡುತ್ತಾರೆ. ಮಹಾವೀರರ ಉಪದೇಶಗಳಲ್ಲಿ ಅಹಿಂಸೆ ಮುಖ್ಯವಾಗಿದೆ. ಹಿಂಸೆ ಮಾಡಬಾರದೆಂದು ಬೋಧಿಸಿದರು. ಈ ಸಂದೇಶ ಇಂದಿನ ಸಮಾಜಕ್ಕೆ ಅತಿ ಪ್ರಾಮುಖ್ಯತೆ ಪಡೆದಿದೆ. ಎಲ್ಲ ಜೀವಿಗಳ ಮೇಲಿನ ಕರುಣೆ ಮತ್ತು ದಯೆ, ನಮ್ಮ ಜೀವನವನ್ನು ಶಾಂತಿಯುತವಾಗಿ ಮಾಡುತ್ತದೆ. ಅದರಂತೆ ಸತ್ಯ ಮತ್ತು ಸರಳ ಜೀವನವನ್ನು ನಡೆಸುದರಿಂದ ನಾವು ಶ್ರೇಷ್ಠ ಮನುಜರಾಗಬಹುದು. ಮಹಾವೀರ ಜಯಂತಿ ಎಂದರೆ, ಕೇವಲ ಅದೊಂದು ಹಬ್ಬವಲ್ಲ. ಇದು ನಮಗೆ ಉತ್ತಮ ಬದುಕಿನ ಮಾರ್ಗವನ್ನು ತೋರಿಸುವ ಒಂದು ಸ್ಮರಣೀಯ ದಿನವಾಗಿದೆ. ಇವರ ಆದರ್ಶಗಳನ್ನು ಅನುಸರಿಸುವ ಮುಖೇನ ನಾವು ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಸಾಧಿಸಬಹುದು. ಈ ಮಹಾನ್ ವ್ಯಕ್ತಿಯ ಜಯಂತಿಯು ನಮಗೆ ಮಾನವೀಯ ಮೌಲ್ಯಗಳ ಮಹತ್ವವನ್ನು ನೆನಪಿಸುತ್ತದೆ. ಈ ದಿನದ ಮಹತ್ವ ತಿಳಿದು, ಅವರ ಉಪದೇಶಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಅತೀ ಅಗತ್ಯ.

**ವರ್ಷಿತ ೭ನೇ ತರಗತಿ**
**ಜಿ.ವಿ.ಸಿ.ಹೆಚ್.ಪಿ.ಎಸ್. ( ಆಂ. ಮಾ)**

## ನರಸರಾಜ ಕ್ಯಾಂಪಸ್ ನಲ್ಲಿ ಎಸ್ಎಸ್ಎಲ್ಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ



ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆ ಕ. ಮಾ ಹಾಗೂ ಗುರುಬಸಮ್ಮ ವಿ. ಚಿಗಟೇರಿ ಪ್ರೌಢಶಾಲೆ ಆಂಗ್ಲ ಮಾಧ್ಯಮ ಶಾಲೆಗಳ ೨೦೨೫–೨೬ ನೇ ಸಾಲಿನ ೧೦ನೇ ತರಗತಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ದಿನಾಂಕ ೧೬/೦೩/೨೦೨೬ ರಂದು ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್ ಜೆ ಜೆ ಇ ಎಸ್ ನ ಕಾರ್ಯದರ್ಶಿ ಮನೋಹರ್ ಎಸ್. ಚಿಗಟೇರಿ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನರಸರಾಜ ಕ್ಯಾಂಪಸ್ ನ ಶೈಕ್ಷಣಿಕ ಸಲಹೆಗಾರರಾದ ಶ್ರೀ ಎಮ್ ಟಿ ಮಳಗಿ, ವಿನೋಬ ನಗರ ಕ್ಯಾಂಪಸ್ ನ ಶೈಕ್ಷಣಿಕ ಸಲಹೆಗಾರರಾದ ಶ್ರೀಮತಿ ಆರ್. ವಾಗ್ದೇವಿ, ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸುರೇಶ್ ನಾಯ್ಕ , ಗುರುಬಸಮ್ಮ ವಿ. ಚಿಗಟೇರಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಚ್. ನಿಂಗಪ್ಪ , ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ವೀರಮ್ಮ ಎಮ್. ಎಸ್. ಭಾಗವಸಹಿಸಿದ್ದರು. ಈ ಸಂದರ್ಭದಲ್ಲಿ ಅಧ್ಯಕ್ಷರು, ಮುಖ್ಯ ಅತಿಥಿಗಳು ವಿದ್ಯಾರ್ಥಿಗಳಿಗೆ ಎಸ್ ಎಸ್ ಎಲ್ ಸಿ ಪರೀಕ್ಷೆ ಎದುರಿಸುವ ಕುರಿತು ಸೂಕ್ತ ಮಾರ್ಗದರ್ಶನ ನೀಡಿ ಎಲ್ಲ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಜಯಶಾಲಿಗಳಾಗುವಂತೆ ಶುಭ ಹಾರೈಸಿದರು. ಕಾರ್ಯಕ್ರಮದಲ್ಲಿ ಎಲ್ಲ ಶಾಲೆಗಳ ಶಿಕ್ಷಕ ಸಿಬ್ಬಂದಿ ವರ್ಗದವರು ಭಾಗವಹಿಸಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ಇದೇ ಸಂದರ್ಭದಲ್ಲಿ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಪರೀಕ್ಷಾ ಪ್ರವೇಶ ಪತ್ರವನ್ನು ವಿತರಿಸಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಸಿಹಿ ವಿತರಿಸಿಲಾಯಿತು.

# ಗುರುಬಸಮ್ಮ ಶಾಲೆಯಲ್ಲಿ ಸರಸ್ವತಿ ಪೂಜೆ



ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಆಂಗ್ಲ ಮಾಧ್ಯಮದಲ್ಲಿ ದಿನಾಂಕ/೧೩/೦೩/೨೦೨೬ ರಂದು ಸರಸ್ವತಿ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಶಾಲೆಯ ಎಲ್ಲ ಶಿಕ್ಷಕ ಸಿಬ್ಬಂದಿ ವರ್ಗದವರು ಹಾಗೂ ಎಲ್ಲ ವಿದ್ಯಾರ್ಥಿಗಳು ಭಾಗವಹಿಸಿ ಸರಸ್ವತಿ ಪೂಜೆಯನ್ನು ನೆರವೇರಿಸಿ ಎಲ್ಲ ಆಶೀರ್ವದಿಸುವಂತೆ ಪ್ರಾರ್ಥಿಸಲಾಯಿತು.

# ಶಾರದ ಪೂಜೆ ಮತ್ತು ಬೀಳ್ಕೊಡುಗೆ ಸಮಾರಂಭ



ದಿನಾಂಕ: ೧೩-೦೩-೨೦೨೬ ರಂದು ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆಯಲ್ಲಿ ಶಾರದ ಪೂಜೆ ಹಾಗೂ ೧೦ನೇ ತರಗತಿ ವಿದ್ಯಾರ್ಥಿಗಳ ಶುಭ ಹಾರೈಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. **ಪ್ರಾರ್ಥನೆ:** ಕಾರ್ಯಕ್ರಮದ ಆರಂಭದಲ್ಲಿ ಶಾಲಾ ವಿದ್ಯಾರ್ಥಿನಿಯರಾದ ರೀತು ಮತ್ತು ತನುಜಾ ಅವರು ಪ್ರಾರ್ಥನೆಯನ್ನು ಮಾಡಿದರು. ಆಡಳಿತ ಮಂಡಳಿಯವರು ಮತ್ತು ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಸೇರಿ ಶಾರದಾ ದೇವಿಯ ಪೂಜೆಯನ್ನು ನೆರವೇರಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲ ಗಣ್ಯರನ್ನು ಶ್ರೀಮತಿ ಜ್ಯೋತಿ ಎಚ್ ಬಿ ಮೇಡಂ ಅವರು ಸ್ವಾಗತಿಸಿದರು. ೯ನೇ ತರಗತಿ ಮತ್ತು ೧೦ನೇ ತರಗತಿಯ ವಿದ್ಯಾರ್ಥಿಗಳು ತಮ್ಮ ಶಾಲಾ ದಿನಗಳ ಅನಿಸಿಕೆಗಳನ್ನು ಹಂಚಿಕೊಂಡರು.೧೦ನೇ ತರಗತಿಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ತರಗತಿ ಶಿಕ್ಷಕರಾದ ಜಿ. ಎಂ. ಪ್ರಭುದೇವ್ ಅವರು ಶಿಕ್ಷಕರ ನುಡಿಗಳನ್ನು ಆಡಿದರು. ಪ್ರಾಥಮಿಕ ಶಾಲೆಯ ಅನಿತಾ ಮೇಡಂ ಅವರು ಮಕ್ಕಳನ್ನು ಉದ್ದೇಶಿಸಿ ಮಾತನಾಡಿದರು. ಶಾಲೆಯ ಕಾರ್ಯದರ್ಶಿಗಳಾದ ಶ್ರೀ ಮನೋಹರ್ ಎಸ್. ಚಿಗಟೇರಿ ಅವರು ೧೦ನೇ ತರಗತಿಯ ಮಕ್ಕಳಿಗೆ ಪರೀಕ್ಷೆಯ ಬಗ್ಗೆ ಉತ್ತಮವಾದ ಸಲಹೆ, ಸೂಚನೆ ಮತ್ತು ಮಾರ್ಗದರ್ಶನ ನೀಡಿದರು. "ಪ್ರತಿಯೊಬ್ಬ ವಿದ್ಯಾರ್ಥಿಯ ಜೀವನದಲ್ಲಿ ೧೦ನೇ ತರಗತಿಯು ಪ್ರಮುಖ ಘಟ್ಟವಾಗಿದೆ." ಎಂದು ತಿಳಿಸಿದರುಶಾಲೆಯ ಶೈಕ್ಷಣಿಕ ಸಲಹೆಗಾರರಾದ ಶ್ರೀಮತಿ ವಾಗ್ದೇವಿ ಮೇಡಂ ಅವರು ಹಾಗೂ ಎಂ ಟಿ ಮಳಗಿ ಸರ್ ಅವರು ಮತ್ತು ನಾಗರಾಜ್ ಎಸ್. ಮೂಖ್ಯೋಪಾಧ್ಯಾಯರು ಅವರು ಮಕ್ಕಳ ಭವಿಷ್ಯದಲ್ಲಿ ೧೦ನೇ ತರಗತಿಯ ಮಹತ್ವವನ್ನು ತಿಳಿಸಿಕೊಟ್ಟರು. ಮುಖ್ಯವಾಗಿ ವಿದ್ಯಾರ್ಥಿಗಳು ಈ ಕೆಳಗಿನ ಗುಣಗಳನ್ನು ಅಳವಡಿಸಿಕೊಳ್ಳಬೇಕೆಂದು ಕಿವಿಮಾತು ಹೇಳಿದರು: ಯಶಸ್ಸಿಗೆ ನಿರಂತರ ಪರಿಶ್ರಮ ಅಗತ್ಯ. ಪರೀಕ್ಷೆಯನ್ನು ಎದುರಿಸಲು ಧೈರ್ಯ ಮತ್ತು ನಂಬಿಕೆ ಇರಲಿ. ಶಿಸ್ತಿನ ಕ್ರಮಬದ್ಧವಾದ ಓದಿನ ವಿಧಾನವನ್ನು ರೂಢಿಸಿಕೊಳ್ಳಿ. ಓದಿನಲ್ಲಿ ಹೆಚ್ಚಿನ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕುಕಾರ್ಯಕ್ರಮದಲ್ಲಿ ೧೦ನೇ ತರಗತಿಯ ವಿದ್ಯಾರ್ಥಿಗಳು ತಮ್ಮ ನೆಚ್ಚಿನ ಶಿಕ್ಷಕರಿಗೆ ಪ್ರೀತಿಯಿಂದ ಉಡುಗೊರೆಗಳನ್ನು ನೀಡಿ ಗೌರವಿಸಿದರು. ಶಿಕ್ಷಕರು ಸಹ ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯುವಂತೆ ಹರಸಿ ಪ್ರೋತ್ಸಾಹಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ೧೦ನೇ ತರಗತಿಯ ವಿದ್ಯಾರ್ಥಿಗಳ ಗುಂಪು ಭಾವಚಿತ್ರವನ್ನು (ಉಡಿಂಣಾಠಿ ಕುಠಣಾಠ) ತೆಗೆದುಕೊಳ್ಳಲಾಯಿತು. ನಂತರ ಬಂದಿದ್ದ ಎಲ್ಲರಿಗೂ ಕೆ. ಪಿ. ರುದ್ರೇಶ್ಮೂರ್ತಿ ಸರ್ ಅವರು ವಂದನಾರ್ಪಣೆ ಮಾಡಿದರು. ಇಡೀ ಕಾರ್ಯಕ್ರಮದ ನಿರೂಪಣೆಯನ್ನು ಶಾಂತಯ್ಯ ಪರಡಿಮಠ ಸರ್ ಅವರು ಅತ್ಯಂತ ಅಚ್ಚುಕಟ್ಟಾಗಿ ನೆರವೇರಿಸಿದರು.

# ಎ.ಜಿ.ಹೆಚ್.ಎಸ್.ನಲ್ಲಿ ಬೀಳ್ಕೊಡಿಗೆ ಮತ್ತು ಶಾರದಾ ಪೂಜೆ



ದಿನಾಂಕ ೧೬-೦೩-೨೦೨೬ ರಂದು ೨೦೨೫-೨೬ನೇ ಶೈಕ್ಷಣಿಕ ಸಾಲಿನ ಅಂಗವಾಗಿ ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿ ವಿದ್ಯಾರ್ಥಿನಿಯರಿಗೆ – ಬೀಳ್ಕೊಡಿಗೆ ಸಮಾರಂಭ ಹಾಗೂ ಶಾರದಾ ಪೂಜೆಯನ್ನು ಭಕ್ತಿಪೂರ್ವಕವಾಗಿ ಹಮ್ಮಿಕೊಳ್ಳಲಾಯಿತು.ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಶಿಕ್ಷಕರು, ಶಿಕ್ಷಕ ವೃಂದ ಹಾಗೂ ಸಿಬ್ಬಂದಿ ವರ್ಗ ಭಾಗವಹಿಸಿ ವಿದ್ಯಾರ್ಥಿನಿಯರ ಭವಿಷ್ಯದ ಬಗ್ಗೆ ಹಾರೈಸಿದರು.. ಶಾರದಾ ದೇವಿಯ ಆರಾಧನೆಯೊಂದಿಗೆ ವಿದ್ಯಾರ್ಥಿನಿಯರು ತಮ್ಮ ಮುಂದಿನ ವಾರ್ಷಿಕ ಪರೀಕ್ಷೆಯಲ್ಲಿ ಉತ್ತಮ

ಫಲಿತಾಂಶ ಸಾಧಿಸಲೆಂದು ಪ್ರಾರ್ಥಿಸಿದರು.ಈ ಸಂದರ್ಭದಲ್ಲಿ ಶಿಕ್ಷಕರು ವಿದ್ಯಾರ್ಥಿನಿಯರಿಗೆ ಮಾರ್ಗದರ್ಶನ ನೀಡುತ್ತಾ, ಆತ್ಮವಿಶ್ವಾಸದಿಂದ ಪರೀಕ್ಷೆಗಳನ್ನು ಎದುರಿಸುವಂತೆ ಸಲಹೆ ನೀಡಿದರು. ವಿದ್ಯಾರ್ಥಿನಿಯರೂ ತಮ್ಮ ಶಾಲಾ ಜೀವನದ ನೆನಪುಗಳನ್ನು ಹಂಚಿಕೊಂಡು ಭಾವನಾತ್ಮಕ ಕ್ಷಣಗಳನ್ನು ಸೃಷ್ಟಿಸಿದರು.

## ಚಿಗುರು ಬೇಸಿಗೆ ಶಿಬಿರ ಉದ್ಘಾಟನೆ



ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆ (ರಿ) ದಾವಣಗೆರೆ ಸಂಸ್ಥೆಯ ನರಸರಾಜ ಕ್ಯಾಂಪಸ್ ನಲ್ಲಿ ದಿನಾಂಕ ೧೧/೦೪/೨೦೨೬ ರ ಶನಿವಾರದಂದು ಬೇಸಿಗೆ ರಜೆಯ ಅಂಗವಾಗಿ ಅಯೋಜಿಸಿರುವ ಚಿಗುರು ಬೇಸಿಗೆ ಶಿಬಿರವನ್ನು ಉದ್ಘಾಟಿಸಲಾಯಿತು. ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗುರುಬಸಮ್ಮ ವಿ. ಚಿಗಟೇರಿ ಆಂಗ್ಲ ಮಾಧ್ಯಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಎಚ್. ನಿಂಗಪ್ಪ ಅವರು ವಹಿಸಿದ್ದರು. ಬೇಸಿಗೆ ಶಿಬಿರವನ್ನು ಶ್ರೀಮತಿ ನೀತಾ ಗೌಡರ್ ಅವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ನರಸರಾಜ ಕ್ಯಾಂಪಸ್ ನ ಶೈಕ್ಷಣಿಕ ಸಲಹೆಗಾರರಾದ ಶ್ರೀಯುತ ಎಮ್. ಟಿ. ಮಳಗಿ , ಗುರುಬಸಮ್ಮ ವಿ. ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮ,ತಿ ಎಮ್. ಎಸ್. ವೀರಮ್ಮ, ಅಕ್ಕಮಹಾದೇವಿ ಬಾಲಿಕಾ ಪ್ರೌಢಶಾಲೆಯ ಹಿರಿಯ ಶಿಕ್ಷಕರಾದ ಶ್ರೀಯುತ ಕೆ. ಆರ್. ರುದ್ರಪ್ಪ ಅವರುಗಳು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಶಾಲೆಗಳ ಶಿಕ್ಷಕ ಸಿಬ್ಬಂದಿ ವರ್ಗದವರು ಹಾಗೂ ಶಿಬಿರಾರ್ಥಿಗಳು ಭಾಗವಹಿಸಿ ಉದ್ಘಾಟನಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನರವೇರಿಸಿದರು.

## ವಿನೋಬನಗರ ಕ್ಯಾಂಪಸ್‌ನಲ್ಲಿ ಚಿಗುರು ಬೇಸಿಗೆ ಶಿಬಿರ ಉದ್ಘಾಟನೆ



ಶ್ರೀ ಜಗದ್ಗುರು ಜಯ ವಿಭವ ವಿದ್ಯಾಸಂಸ್ಥೆಯ ಆಶಯದಲ್ಲಿ ನಡೆಯುತ್ತಿರುವ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲೆ ಹಾಗೂ ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ನರ್ಸರಿ ಹಿರಿಯ ಪ್ರಾಥಮಿಕ ಶಾಲೆ ಕನ್ನಡ ಮತ್ತು ಆಂಗ್ಲ ಮಾಧ್ಯಮ ಈ ಶಾಲೆಗಳ ಸಂಯುಕ್ತ ಆಶ್ರಯ ದಲ್ಲಿ ದಿನಾಂಕ ೧೧ ೪ ೨೦೨೬ರಂದು ಚಿಗುರು ಬೇಸಿಗೆ ಶಿಬಿರದ ಉದ್ಘಾಟನೆ ಸಮಾರಂಭ ನಡೆಯಿತು ಈ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ನಮ್ಮ ಶಾಲೆಯ ಹಿರಿಯ ವಿದ್ಯಾರ್ಥಿ ಸುಮಿತ್ ಜೆ ರಾವಲ್ ಅವರು ಕಾರ್ಯಕ್ರಮವನ್ನು ಕುಂಬಾರಿಕೆಯ ಮಡಿಕೆ ಮಾಡುವ ಮೂಲಕ ಉದ್ಘಾಟನೆ ಮಾಡಿದರು ಈ ಕಾರ್ಯಕ್ರಮದಲ್ಲಿ ಶೈಕ್ಷಣಿಕ ಸಲಹೆಗಾರರಾದ ಶ್ರೀಮತಿ ಆರ್ ವಾಗ್ದೇವಿ ಹಾಗೂ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ನಾಗರಾಜ್ ಎಸ್ ಇವರು ಭಾಗವಹಿಸಿ ಮಕ್ಕಳಿಗೆ ಶುಭ ಹಾರೈಸಿದರು. ಹಾಗೂ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಶೈಲಜಾ ಮುಖ್ಯೋಪಾಧ್ಯಾಯರು ವಹಿಸಿದ್ದರು ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.ಎಲ್ಲಾ ವಿದ್ಯಾರ್ಥಿಗಳು ಸಂತೋಷದಿಂದ ಮಣ್ಣಿನ ವಿವಿಧ ಆಕೃತಿಗಳನ್ನು ತಯಾರಿಸುವಲ್ಲಿ ಆಸಕ್ತಿಯಿಂದ ಭಾಗವಹಿಸಿದರು. ವಿವಿಧ ಆಕೃತಿಗಳನ್ನು ತಯಾರಿಸಿದರು.ಹಾಗೂ ಈ ಕಾರ್ಯಕ್ರಮಕ್ಕೆ ವಿದ್ಯಾಸಂಸ್ಥೆಯ ಉಪಾಧ್ಯಕ್ಷರಾದ ಬಸವರಾಜಪ್ಪ ಬೆಳಗಾವಿ ಹಾಗೂ ಶ್ರೀ ಮನೋಹರ್ ಚಿಗಟೇರಿಯವರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು

## ವಿಶ್ವ ಕಿಡ್ನಿ ದಿನ

ಮಾರ್ಚ್ ೧೨ ರಂದು ಮೂತ್ರಪಿಂಡದ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ. ಭವಿಷ್ಯದಲ್ಲಿ ಕಿಡ್ನಿ ಆರೋಗ್ಯ ಕಾಪಾಡಿಕೊಳ್ಳಲು ಸರಿಯಾದ ಆಹಾರ ಪದ್ಧತಿ, ಮಿತವಾದ ಉಪ್ಪು ಮತ್ತು ಸಕ್ಕರೆ ಬಳಕೆ, ಪ್ರೋಟೀನ್ ಮುಂತಾದ ಆಹಾರದ ಸೇವನೆಯು ಮನುಷ್ಯನ ಆರೋಗ್ಯಕ್ಕೆ ತುಂಬಾ ಸಹಕಾರಿಯಾಗಿದೆ. ಆದರೆ ಇಂದಿನ ಜೀವನಶೈಲಿ, ಆಹಾರಕ್ರಮ ಇತ್ಯಾದಿಗಳಿಂದ ಕಿಡ್ನಿಯ ಮೇಲಿನ ಒತ್ತಡವು ಹೆಚ್ಚಾಗುತ್ತಿದೆ. ಬಾಯಿಗೆ ರುಚಿಯಾದದ್ದನ್ನು ತಿನ್ನುವುದರಿಂದ ಅಂಗಾಂಶಗಳ ಮೇಲಿನ ಒತ್ತಡವು ಹೆಚ್ಚಾಗಿ, ಕೊನೆಗೆ ಇದು ವೈಫಲ್ಯಕ್ಕೆ ಒಳಗಾಗುವುದು. ಇಂದಿನ ದಿನಗಳಲ್ಲಿ ಹಲವಾರು ರೀತಿಯ ಸಮಸ್ಯೆಗಳು ದೇಹವನ್ನು ಕಾಡುವುದು, ಹೀಗಾಗಿ ಕಿಡ್ನಿಯ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅತೀ ಅಗತ್ಯ.

# ವಿ.ಎಂ.ಸಿ ಶಾಲೆಯಲ್ಲಿ ನಾಟಕ ಪ್ರದರ್ಶನ



ಶ್ರೀ ವೀರಭದ್ರಪ್ಪ ಎಂ ಚಿಗಟೇರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಶ್ರೀ ಜಗದ್ಗುರು ಜಯದೇವ ಮರುಘ ರಾಜೇಂದ್ರ ಪ್ರೌಢಶಾಲೆ ವಿದ್ಯಾರ್ಥಿಗಳು ನಮ್ಮ ಶಾಲಾ ಆವರಣದಲ್ಲಿರುವ ಶ್ರೀಮತಿ ಸುರೇಖಾ ವಿ ಚಿಗಟೇರಿ ಕಲಾಮಂದಿರದಲ್ಲಿ ದಿನಾಂಕ ೨೭.೦೩.೨೦೨೬ರಂದು "ನನ್ನ ಗೋಪಾಲ" ಮತ್ತು "ಹಾಡು ಹಕ್ಕಿ " ನಾಟಕ ವನ್ನು ಪ್ರದರ್ಶಿಸಿದರು.ನಮ್ಮ ವಿದ್ಯಾಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಮನೋಹರ್ ಎಸ್ ಚಿಗಟೇರಿಯವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ನಾಟಕದ ಜವಾಬ್ದಾರಿಯನ್ನು ಶ್ರೀಯುತ ರುದ್ರೇಶ್ ಮೂರ್ತಿ ಕೆಪಿ ಸಹ ಶಿಕ್ಷಕರು ವಹಿಸಿದ್ದರು. ರಂಗಭೂಮಿಯ ದಿನಾಚರಣೆಯ ಅಂಗವಾಗಿ ಈ ನಾಟಕಗಳು ಪ್ರದರ್ಶನವಾದವು ನಮ್ಮ ವಿದ್ಯಾರ್ಥಿಗಳು ನಾಟಕದಲ್ಲಿ ಉತ್ತಮ ಪ್ರದರ್ಶನ ನೀಡಿದರು ಎರಡು ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಶಿಕ್ಷಕರು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯದರ್ಶಿ ಮನೋಹರ್ ಎಸ್ ಚಿಗಟೇರಿಯವರು ಹಾಗೂ ಶಿಕ್ಷಕ ವೃಂದದವರು ಶೈಕ್ಷಣಿಕ ಸಲಹೆಗಾರರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು .

# ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ

ಮಮತೆಯಲ್ಲಿ ಮಗಳಾಗಿ, ಅಕ್ಕರೆಯಲ್ಲಿ ಅಕ್ಕನಾಗಿ, ತುಂಟಾಟದಲ್ಲಿ ತಂಗಿಯಾಗಿ, ಗೆಳೆತನದಲ್ಲಿ ಸ್ನೇಹಿತೆಯಾಗಿ, ತಾಳ್ಮೆಯಲ್ಲಿ ತಾಯಿಯಾಗಿ... ಜೀವನವಿಡೀ ತನ್ನವರಿಗಾಗಿ ದುಡಿಯುವ ಮಹಿಳೆಯಾಗಿ ಮಹಿಳೆ ತನ್ನನ್ನು ತಾನು ಗುರುತಿಸಿಕೊಳ್ಳುತ್ತಿದ್ದಾಳೆ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಪ್ರತಿ ವರ್ಷ ಮಾರ್ಚ್ ೮ ರಂದು ಆಚರಿಸಲಾಗುತ್ತದೆ. ಇದು ಮಹಿಳೆಯರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಾಧನೆಗಳನ್ನು ಸಂಭ್ರಮಿಸುವ ಹಾಗೂ ಲಿಂಗ ಸಮಾನತೆಗಾಗಿ ಜಾಗೃತಿ ಮೂಡಿಸುವ ದಿನವಾಗಿದೆ. ೧೯೦೦ರ ಆರಂಭದಲ್ಲಿ ಕಾರ್ಮಿಕ ಮಹಿಳೆಯರ ಹಕ್ಕುಗಳಿಗಾಗಿ ನಡೆದ ಹೋರಾಟದಲ್ಲಿ ಇಂದು ವಿಶ್ವದಾದ್ಯಂತ ಮಹಿಳಾ ದಿನಾಚರಣೆಯಾಗಿ ಆಚರಿಸಲ್ಪಡುತ್ತಿದೆ.

# ಸಂಭ್ರಮದ ಯುಗಾದಿ ಹಬ್ಬ

ಯುಗಾದಿಯು ಚೈತ್ರ ಮಾಸದ ಶುಕ್ಲ ಪಕ್ಷದ ಪ್ರತಿಪದೆಯಂದು ಆಚರಿಸಲಾಗುವ ಹಿಂದೂಗಳ ಹೊಸ ವರ್ಷವಾಗಿದೆ. ಇದು ಪ್ರಕೃತಿಯ ಸಂಭ್ರಮದ ಹೊಸ ವರ್ಷವಾಗಿದೆ. ಇದು ಜೀವನದ ಸುಖ-ದುಃಖಗಳನ್ನು ಸಮಾನವಾಗಿ ಸ್ವೀಕರಿಸುವುದನ್ನು ಸಂಕೇತಿಸುತ್ತದೆ. ಬ್ರಹ್ಮನು ಸೃಷ್ಟಿಯನ್ನು ಪ್ರಾರಂಭಿಸಿದ ದಿನವೆಂದು ನಂಬಲಾದ ಈ ಹಬ್ಬವು ವಸಂತ ಋತುವಿನ ಆರಂಭದ ಮುನ್ಸೂಚನೆ ನೀಡುತ್ತದೆ. ಮನೆಗಳ ಅಲಂಕಾರ, ಹೊಸ ಬಟ್ಟೆ ಧರಿಸುವುದು ಮತ್ತು ನಸುಕಿನ ಜಾವದ ಎಣ್ಣೆ ಸ್ನಾನ, ಮಾವಿನ ಎಲೆ ತೋರಣ, ಬಣ್ಣದ ರಂಗೋಲಿ, ಹೋಳಿಗೆ ಹಾಗೂ ಒಬ್ಬಟ್ಟು ಸವಿಯುವುದು ಈ ಹಬ್ಬದ ವಿಶೇಷ. ಯುಗ + ಆದಿ ಎಂದರೆ ಹೊಸ ಯುಗದ ಅಥವಾ ವರ್ಷದ ಆರಂಭ. ಇದು ಚಾಂದ್ರಮಾನ ಪಂಚಾಂಗದ ಪ್ರಕಾರ ಹೊಸ ವರ್ಷದ ಸಂವತ್ಸರದ ಮೊದಲ ದಿನ ಎಂಬ ಪ್ರತೀತಿಯನ್ನು ಪಡೆದಿದೆ.

# ವಿಶ್ವ ಜಲ ದಿನ

"ಜಲವೇ ಜೀವನ" ಎಂಬ ನಾಣ್ಣುಡಿಯಂತೆ ಭೂಮಿಯ ಮೇಲಿನ ಪ್ರತಿಯೊಂದು ಜೀವಿಯ ಅಸ್ತಿತ್ವಕ್ಕೆ ನೀರು ಅತ್ಯಗತ್ಯ. ಗಾಳಿ ಮತ್ತು ಆಹಾರದಷ್ಟೇ ಪ್ರಮುಖತೆಯನ್ನು ನೀರು ಹೊಂದಿದೆ. ಮನುಷ್ಯ ಆಹಾರವಿಲ್ಲದೆ ಕೆಲವು ದಿನಗಳ ಕಾಲ ಬದುಕಬಲ್ಲನು, ಆದರೆ ನೀರಿಲ್ಲದೆ ಬದುಕುವುದು ಅಸಾಧ್ಯ. ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಅತಿಯಾದ ಬಳಕೆಯಿಂದಾಗಿ ಇಂದು ಜಗತ್ತು ತೀವ್ರ ನೀರಿನ ಅಭಾವವನ್ನು ಎದುರಿಸುತ್ತಿದೆ. ಈ ಹಿನ್ನೆಲೆಯಲ್ಲಿ ನೀರಿನ ಮಹತ್ವವನ್ನು ಸಾರಲು ಮತ್ತು ಅದರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ಮಾರ್ಚ್ ೨೨ ರಂದು ವಿಶ್ವ ಜಲ ದಿನವನ್ನು ಆಚರಿಸಲಾಗುತ್ತದೆ.

# ವಿಶ್ವ ರಂಗಭೂಮಿ ದಿನಾಚರಣೆ




ವಿಶ್ವ ರಂಗಭೂಮಿ ದಿನವನ್ನು ಪ್ರತಿ ವರ್ಷ ಮಾರ್ಚ್ ೨೭ ರಂದು ನಾಟಕ ಮತ್ತು ಕಲೆಯ ಮಹತ್ವವನ್ನು ಗುರುತಿಸಲು ಮತ್ತು ಪ್ರಪಂಚದಾದ್ಯಂತ ಈ ಶಕ್ತಿಯುತ ಕಲೆಗಾಗಿ ಜಾಗೃತಿ ಮೂಡಿಸಲು ಆಚರಿಸಲಾಗುತ್ತದೆ. ರಂಗಭೂಮಿ ಯೋಗ ಇದ್ದಂತೆ ಸಾವಿರಾರು ವರ್ಷಗಳ ಇತಿಹಾಸವಿದ್ದು ರಂಗಭೂಮಿಗೆ ಬುದ್ಧಿಮತ್ತೆ ಸ್ಥಿರವಾಗಿಡುವ ಶಕ್ತಿ ಇದೆ. ಅಂಗೀಕ ಶಕ್ತಿಯನ್ನು ಹೆಚ್ಚಿಸುತ್ತದೆ. ನೆನಪಿನ ಶಕ್ತಿಯನ್ನು ಉಳಿಸುತ್ತದೆ. ಮತ್ತು ಭಾಷಾ ಸ್ಪಷ್ಟತೆಯನ್ನು ತಿಳಿಸುತ್ತದೆ. ಇವೆಲ್ಲವುಗಳನ್ನು ಒಳಗೊಂಡ ಶಕ್ತಿ ರಂಗಭೂಮಿಗೆ ಇದೆ ಎಂದು ರಂಗಕರ್ಮಿಯು ಆಗಿರುವ ಪತ್ರಕರ್ತ ಹೇಳಿದರು. ವಿನೋಬನಗರದಲ್ಲಿನ ಶ್ರೀ ಜಗದ್ಗುರು ಜಯದೇವ ಮುರುಘರಾಜೇಂದ್ರ ಪ್ರೌಢಶಾಲಾ ಆವರಣದಲ್ಲಿನ ಶ್ರೀಮತಿ ಸುರೇಖಾ ವೀರಣ್ಣ ಚಿಗಟೇರಿ ರಂಗಮಂದಿರ ದಲ್ಲಿ ಕರ್ನಾಟಕ ಕರ್ನಾಟಕ ಅಕಾಡೆಮಿ ಬೆಂಗಳೂರು, ಅನ್ವೇಷಕರು ಆರ್ಟ್ ಫೌಂಡೇಶನ್ ದಾವಣಗೆರೆ ಶಾಖೆ ವತಿಯಿಂದ ಮಾರ್ಚ್ ೨೭ ರ ಶುಕ್ರವಾರ ಸಂಜೆ ಹಮ್ಮಿಕೊಂಡಿದ್ದ ವಿಶ್ವ ರಂಗಭೂಮಿ ದಿನಾಚರಣೆ ಕಾರ್ಯಕ್ರಮವನ್ನು ನಾಟಕದ ಪಾತ್ರಧಾರಿ ಮುಖಕ್ಕೆ ಬಣ್ಣ ಹಚ್ಚುವ (ಪ್ರಸಾದನ) ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ರಂಗಭೂಮಿ ಫೀನಿಕ್ಸ್ ಪಕ್ಷಿ ಇದ್ದಂತೆ ಬರೀ ಮನೋರಂಜನೆಗಾಗಿ ಅಲ್ಲ ವಾಸ್ತವದ ಸಂಕಟ, ಜೀವಂತಿಕೆಯನ್ನು ಕಟ್ಟಿಕೊಡುತ್ತದೆ. ಇದಕ್ಕೆ ಐತಿಹಾಸಿಕ ಕಪ್ಪಗಲ್ಲು ಮತ್ತು ಸಂಗನಕಲ್ಲು ಸ್ಥಳಗಳನ್ನ ಉದಾಹರಿಸಿ ಮಾತನಾಡಿದರು. ಪ್ರತಿಮಾ ಸಭಾ ಮಂಕಾಯಿತು ಎನ್ನುವಂತಿದ್ದಂತೆ ಸಿದ್ದರಾಜು, ಶಂಬಣ್ಣ, ಶಿವಕುಮಾರ ರಂತಹ ರಂಗಕರ್ಮಿಗಳು ಬಂದು ನಿರಂತರವಾಗಿ ರಂಗ ಚಟುವಟಿಕೆಗಳನ್ನ ನಡೆಸುತ್ತಾ ಬರುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ತುಸು ರಂಗ ಆಸಕ್ತಿ ಕಡಿಮೆ ಆಗಿರಬಹುದು. ಆದರೆ ರಂಗಭೂಮಿಯ ಜೀವಂತಿಕೆಯನ್ನು ಪ್ರತಿಮಾ ಸಭಾ ಉಳಿಸಿಕೊಂಡು ಬಂದಿದೆ ಎಂದರು. ಕೇವಲ ಮನೋರಂಜನೆಯ ದೃಷ್ಟಿಯಿಂದ ನೋಡಲಾಗದು, ರಂಗಭೂಮಿ ಅದೊಂದು ಯೋಗ ಇದ್ದಂತೆ, ದೈಹಿಕ ಮತ್ತು ಮಾನಸಿಕ ಸದೃಢತೆ, ಏಕಾಗ್ರತೆಗೆ ಯೋಗಭ್ಯಾಸ ಮಾಡಲಾಗುತ್ತದೆ. ಅದನ್ನು ಮೀರಿದ ಶಕ್ತಿ ರಂಗಭೂಮಿಗೆ ಇದೆ ಎಂದು ಹೇಳಿದರು. ರಂಗಭೂಮಿಯಿಂದ ಆಗಬಹುದಾದ ಲಾಭಗಳ ಬಗ್ಗೆ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಬೇಕಾಗಿದೆ. ಅಧ್ಯಾಪಕ ವರ್ಗ ಈ ಬಗ್ಗೆ ಯೋಚಿಸಬೇಕಾದ ಅಗತ್ಯವಿದೆ ಎಂದರು. ರಂಗಭೂಮಿಯ ಅವಸಾನದ ಬಗ್ಗೆ ಯಾವಾಗಲೂ ಮಾತನಾಡಬಾರದು. ನಿರಾಸೆಯಾಗದೆ ರಂಗ ಚಟುವಟಿಕೆಗಳನ್ನು ನಿರಂತರವಾಗಿ ಮಾಡುತ್ತಾ ಹೋಗಬೇಕು. ರಂಗಸಂಘಟಕರಿಗೆ ಪ್ರೋತ್ಸಾಹ, ಸಹಕಾರ ಮಾಡಬೇಕಾಗಿದೆ. ರಂಗಭೂಮಿ ವೈಭವ ಬರಲಿದೆ ಎಂದು ಆಶಿಸಿದರು. ರಂಗನಟಿಯು ಆಗಿರುವ ಹಿರಿಯ ಲೇಖಕಿ ಶ್ರೀಮತಿ ಟಿ ಎಸ್ ಶೈಲಜಾ ಮಾತನಾಡಿ ರಂಗಭೂಮಿಗೆ ಪ್ರಾಚೀನ ಇತಿಹಾಸವಿದೆ. ಜನಪದ, ವೃತ್ತಿ ಮತ್ತು ಹವ್ಯಾಸಿ ಎಂದು ಮೂರು ವಿಭಾಗಗಳನ್ನಾಗಿ ವಿಂಗಡಿಸಬಹುದು. ಉತ್ತರ ಕರ್ನಾಟಕದಲ್ಲಿ ಅತಿ ಹೆಚ್ಚು ನಾಟಕ ಕಂಪನಿಗಳು ಹೆಚ್ಚು ಪ್ರಚಲಿತದಲ್ಲಿ ಇದ್ದವು. ರಂಗ ಭೂಮಿಗೆ ಅಗಾಧ ಶಕ್ತಿ ಇದೆ ಎಂದರು. ದೆಹಲಿಯ ಎನ್ ಎಸ್ ಡಿ, ಕರ್ನಾಟಕದಲ್ಲಿ ಆರು ಕಡೆ ರಂಗಾಯಣ ಶಾಖೆಗಳು ತರಬೇತಿ ಶಾಲೆಗಳು ಕಲಾವಿದರಿಗೆ ನಿರಂತರವಾಗಿ ರಂಗ ತರಬೇತಿ ನೀಡುತ್ತಾ ಬರುತ್ತಿದ್ದು ಅತ್ಯುತ್ತಮ ಕಲಾವಿದರು ಹೊರಹೊಮ್ಮುತ್ತಿದ್ದಾರೆ. ಎಂದು ಹೇಳಿದರು. ಪ್ರತಿ ವರ್ಷ ರಂಗಭೂಮಿ ಕ್ಷೇತ್ರದ ರಂಗ ದಿಗ್ಗಜರು ಜಾಗತಿಕ ಸಂದೇಶವನ್ನು ನೀಡುತ್ತಾರೆ. ರಂಗಭೂಮಿ ಕೇವಲ ಮನರಂಜನೆಯಲ್ಲ ಅದು ಸಮಾಜದ ಕನ್ನಡಿ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಶಕ್ತಿಶಾಲಿ ಮಾಧ್ಯಮ ಎಂದರು. ಶ್ರೀ ಜಗದ್ಗುರು ಜಯವಿಭವ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಮನೋಹರ ಎಸ್ ಚಿಗಟೇರಿಯವರು ಅಧ್ಯಕ್ಷತೆ ವಹಿಸಿ ಮಾತನಾಡಿ ರಂಗಭೂಮಿಗೆ ಸಂಬಂಧಿಸಿದ ಯಾವುದೇ ಕಾರ್ಯಕ್ರಮಗಳಾಗಿರಲಿ ನಮ್ಮ ಸಂಸ್ಥೆಯ ಸಂಪೂರ್ಣ ಸಹಕಾರ ಇರುತ್ತದೆ. ನಾಟಕಗಳು ಕೇವಲ ಮನೋರಂಜನೆ ನೀಡುವಂಥವುಗಳಲ್ಲ, ಸಮಾಜ ತಿದ್ದುವ ಶಕ್ತಿ ರಂಗಭೂಮಿಗಿದೆ ಎಂದು ಹೇಳಿದರು. ಈ ದಿನದಂದು ಕರ್ನಾಟಕ ನಾಟಕ ಅಕಾಡೆಮಿ (ಬೆಂಗಳೂರು), ಅನ್ವೇಷಕರು ಮತ್ತು ಅಟಲ್ ಫೌಂಡೇಶನ್ (ರಿ) ದಾವಣಗೆರೆ ಇವರ ಸಂಯುಕ್ತ ಆಶ್ರಯದಲ್ಲಿ, ನಮ್ಮ ಪ್ರಾಥಮಿಕ ಮತ್ತು ಪ್ರೌಢಶಾಲಾ ಹಂತದ ಮಕ್ಕಳಿಂದ ನಾಟಕ ಪ್ರದರ್ಶನವನ್ನು ನಡೆಸಲಾಯಿತು.

# ಸ್ವರಚಿತ ಕವನಗಳು

೧. ಮೀನಿಗೆ ನೀರು ಎಷ್ಟು ಮುಖ್ಯವೋ
ನನಗೆ ನಮ್ಮ ತಂದೆ–ತಾಯಿ
ಅಷ್ಟೇ ಮುಖ್ಯ

೨. ನಾವು ಜೀವನದಲ್ಲಿ ಒಂದು ವಸ್ತುವನ್ನು
ಪಡೆದುಕೊಳ್ಳಬೇಕೆಂದರೆ ಮತ್ತೊಂದು ವಸ್ತುವನ್ನು
ಕಳೆದುಕೊಳ್ಳಬೇಕು ಅದುವೇ ಜೀವನದ ಧರ್ಮ

೩. ತಪ್ಪು ಇಲ್ಲದ ಕಡೆ ತಲೆ ಬಾಗಿಸಬೇಡ
ನಂಬಿಕೆ ಇಲ್ಲದ ಕಡೆ ವಾದ ಮಾಡಬೇಡ

೪. ಸೂರ್ಯನಿಲ್ಲದೆ ಹಗಲಿಲ್ಲ
ಚಂದ್ರನಿಲ್ಲದೆ ರಾತ್ರಿಯಿಲ್ಲ
ಶಿಕ್ಷಕರಿಲ್ಲದೆ ವಿದ್ಯೆಯಿಲ್ಲ

**ಸಿಂಚನ ಯು ೭ನೇ ತರಗತಿ**
**ಜಿ. ವಿ. ಸಿ. ಹೆಚ್. ಪಿ .ಎಸ್ ( ಕ ಮಾ )**

# ಎಸ್ ಸಿ ಎಸ್ ನರ್ಸರಿಯ ಚಿಗುರು ಬೇಸಿಗೆ ಶಿಬಿರದ ಝಲಕ್





















